ಹಬ್ಬಕ್ಕೆ ಕಬ್ಬಾಳಮ್ಮನ ಪೂಜೆ ಮಾಡಿ, ಊರಲ್ಲಿ ಜಾತ್ರೆ ಆಚರಿಸುತ್ತೇವೆ. ಆಗ ದೇವರು ಮೈಮೇಲೆ ಬರುತ್ತದೆ. ಪಂಜುರ್ಲಿಯಂತೆಯೇ ನಮಗೆ ಕಬ್ಬಾಳಮ್ಮ. ಆದರೆ ದೈವಾಚರಣೆಯ ವಿಧಾನ ಬೇರೆ. ಕಬ್ಬಾಳಮ್ಮನಿಗೆ ಮರಿ ಹೊಡಿತೀವಿ. ಪಂಜುರ್ಲಿಗೆ ಸಸ್ಯಾಹಾರ. ಈ ಕಾರಣಕ್ಕೇ ಇರಬಹುದು, ನಮ್ಮ ನೆಲೆಯನ್ನು ವೈವಿಧ್ಯಮಯ ಬೀಡು ಅನ್ನುವುದು.

◆ ಲೀಲಾ ಪಾತ್ರಕ್ಕೆ ನೀವು ಆಯ್ಕೆಯಾಗಿದ್ದು ಹೇಗೆ?

ಲೀಲಾ ಪಾತ್ರಕ್ಕಾಗಿ ಹುಡುಕಾಟ ನಡೆಯುತ್ತಿದ್ದಾಗ ರಿಷಬ್ ಶೆಟ್ಟಿ ಕಣ್ಣಿಗೆ ಇನ್‌ಸ್ಟಾಗ್ರಾಂನಲ್ಲಿ ನನ್ನ ಫೋಟೊವೊಂದು ಬಿದ್ದಿದೆ. ಇವಳೇ ಲೀಲಾ ಅಂತ ನಿರ್ಧರಿಸಿ ಆಡಿಷನ್‌ಗೆ ಕರೆದರು. ಆಯ್ಕೆಯೂ ಆದೆ.

◆ ಸ್ವಿಮ್ಮಿಂಗ್‌ನಿಂದ ನಟನೆಗೆ ಜಿಗಿದಿದ್ದು ಹೇಗೆ?

ರಾಷ್ಟ್ರೀಯ ಮಟ್ಟದ ಈಜುಪಟುವಾಗಿದ್ದ ನನ್ನ ಮುಂದೆ ಎಂಜಿನಿಯರಿಂಗ್ ಮುಗಿದ ಮೇಲೆ ಮುಂದೇನು ಎಂಬ ಪ್ರಶ್ನೆ ಇತ್ತು. ನಟನೆಗೆ ಹೋಗುವುದಾ ಅಥವಾ ಎಜುಕೇಷನ್ ಮುಂದುವರೆಸುವುದಾ ಎಂಬ ಗೊಂದಲದಲ್ಲಿದ್ದೆ. ಸಿನಿಮಾದಲ್ಲಿ ನಟಿಸುವಾಸೆಯೂ ಮನದೊಳಗೆ ಸುಪ್ತವಾಗಿಯೇ ಇತ್ತು. ಅದಕ್ಕೆ ಜೀವ ತುಂಬಿದವರು ಸೂರಿ ಸರ್. 'ಪಾಪ್‌ಕಾರ್ನ್ ಮಂಕಿ ಟೈಗರ್' ಸಿನಿಮಾದಲ್ಲಿ ಗಿರಿಜಾ ಎನ್ನುವ ಪಾತ್ರವಿದೆ. ಅದಕ್ಕೆ ನಿಮ್ಮ ಮಗಳನ್ನು ಆಯ್ಕೆ ಮಾಡಿದ್ದೇನೆ' ಎಂದು ದುನಿಯಾ ಸೂರಿ ಸರ್ ಅಪ್ಪನಿಗೆ ಹೇಳಿದ್ದರು. ಅಪ್ಪನೂ, 'ಒಮ್ಮೆ ಪ್ರಯತ್ನ ನೋಡು' ಎಂದಿದ್ದರು. ಹಾಗಾಗಿ, ಚಿತ್ರರಂಗಕ್ಕೆ ನನ್ನನ್ನು ಪರಿಚಯಿಸಿದ್ದು ಸೂರಿ ಸರ್.

◆ ನಿಮ್ಮ ತಂದೆ–ತಾಯಿಗೆ ಗಿರಿಜಾ ಇಷ್ಟವಾ? ಲೀಲಾ ಇಷ್ಟವಾ? ನಿಮ್ಮ ಸಿನಿ ಜರ್ನಿಗೆ ಅವರ ಸಹಕಾರ ಹೇಗಿದೆ?



ಯಶಸ್ಸಿನ ಗುಂಗಿನಲ್ಲಿ ಅಮ್ಮ–ಅಪ್ಪನನ್ನು ಈ ಬಗ್ಗೆ ಕೇಳುವುದನ್ನೇ ಮರೆತಿದ್ದೇನೆ. ಕೇಳಬೇಕಿತ್ತು, ಕೇಳುವೆ. ನನ್ನ ಅಂದಾಜಿನಂತೆ ಗಿರಿಜಾ, ಲೀಲಾ ಪಾತ್ರಗಳಲ್ಲಿ ಲೀಲಾನೇ ಅವರಿಗಿಷ್ಟ.

ಅಪ್ಪ ಎಸ್.ಕೆ. ಉಮೇಶ್, ಅಮ್ಮ ಶಾಂತಾ. ಅಪ್ಪ ನಿವೃತ್ತ ಪೊಲೀಸ್ ಅಧಿಕಾರಿ. ನನ್ನಂತೆಯೇ ತಂಗಿ ಉತ್ತರೆಯೂ ರಾಷ್ಟ್ರೀಯ ಮಟ್ಟದ ಈಜುಪಟು. ಮೂರನೇ ವರ್ಷದ ಮೆಡಿಕಲ್ ಓದುತ್ತಿದ್ದಾಳೆ. ಮುಂಚೆ ಅಮ್ಮ ನನ್ನ ಜೊತೆ ಸ್ವಿಮ್ಮಿಂಗ್ ಅಂತ ಓಡಾಡ್ತಿದ್ದರು. ಈಗ ಶೂಟಿಂಗ್ ಅಂತ ಓಡಾಡ್ತಾ ಇದಾರೆ.

◆ 'ಪಾಪ್ ಕಾರ್ನ್ ಮಂಕಿ ಟೈಗರ್' ಮತ್ತು 'ಕಾಂತಾರ' ಎರಡರಲ್ಲಿ ನಿಮ್ಮ ಯಾವ ಪಾತ್ರ ಇಷ್ಟ? ಯಾಕೆ?

ನಿಜ ಜೀವನದಲ್ಲಿ ನಾನಲ್ಲದ್ದನ್ನು ತೆರೆಯ ಮೇಲೆ ನಾನು ಮಾಡಿದಾಗಲೇ ಒಬ್ಬ ನಟಿಯಾಗಿ ಗುರುತಿಸಿಕೊಳ್ಳಲು ಸಾಧ್ಯ. ಅಂತಹ ಅವಕಾಶ ಕೊಟ್ಟಿದ್ದು 'ಲೀಲಾ'. ಅದೇ ಕಾರಣಕ್ಕೆ ಆ ಪಾತ್ರವೇ ನನ್ನ ಆಯ್ಕೆ. ಅದು ಗೊತ್ತಿಲ್ಲದ್ದನ್ನು ತುಂಬಾನೇ ಕಲಿಸಿದೆ. ಕಲಿಯುವುದಕ್ಕೂ ಸಾಕಷ್ಟು ಜಾಗವನ್ನು ಕೊಟ್ಟಿದೆ.

◆ ನಿಜ ಜೀವನದಲ್ಲಿ ನಿಮ್ಮ ತಂದೆ ಪೊಲೀಸ್ ಅಧಿಕಾರಿ. ಬಣ್ಣದ ಬದುಕಿನಲ್ಲಿ ನೀವು ಅರಣ್ಯ ರಕ್ಷಕಿ. ಏನನ್ನಿಸಿತು?

ನಾನು ಐಪಿಎಸ್ ಅಧಿಕಾರಿಯಾಗಿದ್ದಿದ್ದರೆ ಅಪ್ಪ ತುಂಬಾನೇ ಖುಷಿಪಡುತ್ತಿದ್ದರು. ಅದು ಅವರ ಆಸೆಯೂ ಆಗಿತ್ತು. ಆದರೆ ಈಗ, 'ನಿಜಜೀವನದಲ್ಲಿ ಖಾಕಿ ತೊಡದವಳು ಬಣ್ಣದ ಬದುಕಿನಲ್ಲಾದರೂ ಖಾಕಿ ಧರಿಸಿದ್ದಾಳೆ' ಅನ್ನುವ ಖುಷಿ ಅವರದ್ದು.

■



ಪುನೀತ್ ಮತ್ತು ಅಮೋಘವರ್ಷ

# ಪುನೀತ್ ಹಬ್ಬ!

ನವೆಂಬರ್ ತಿಂಗಳ ಕನ್ನಡ ಹಬ್ಬ 'ಪುನೀತ್‌ಮಯ' ಆಗುವ ಎಲ್ಲ ಸಾಧ್ಯತೆಗಳಿವೆ. ಈ 'ಪುನೀತ್‌ಹಬ್ಬ'ಕ್ಕೆ ಎರಡು ಆಯಾಮ. ಮೊದಲನೆಯದು, 'ಕರ್ನಾಟಕ ರತ್ನ' ಪ್ರಶಸ್ತಿ ಸಂಭ್ರಮ. ಎರಡನೆಯದು 'ಗಂಧದಗುಡಿ' ಡಾಕ್ಯುಡ್ರಾಮದ ಬಿಡುಗಡೆ.

ನವೆಂಬರ್ 1ರಂದು ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ 'ಕರ್ನಾಟಕ ರತ್ನ' ಪ್ರಶಸ್ತಿ ಪ್ರದಾನ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಪುನೀತ್ ಅವರಿಗೆ ರಾಜ್ಯದ ಅತ್ಯುನ್ನತ ನಾಗರಿಕ ಪ್ರಶಸ್ತಿ ಸಲ್ಲುವ ಮೂಲಕ, 'ಕರ್ನಾಟಕ ರತ್ನ'ಗಳ ಸಂಖ್ಯೆ 'ನವರತ್ನ' ಆಗಲಿದೆ. ಈ ಪುರಸ್ಕಾರ ಆರಂಭಗೊಂಡಿದ್ದೇ ಕುವೆಂಪು ಮತ್ತು ರಾಜ್‌ಕುಮಾರ್ ಅವರಿಗೆ ಸಲ್ಲುವ ಮೂಲಕ. ಈಗ ಪುನೀತ್ ಅವರೂ ಆ ಸಾಲಿಗೆ ಸೇರುವ ಮೂಲಕ ಒಂದೇ ಕುಟುಂಬದ ಇಬ್ಬರಿಗೆ ಅತ್ಯುನ್ನತ ಗೌರವ ಸಂದಂತಾಗುತ್ತದೆ.

ಪುನೀತ್ ಹೆಸರು ಯುವಜನರಿಗೆ ಪ್ರೇರಣೆ ನೀಡಬೇಕು ಎನ್ನುವ ಉದ್ದೇಶದಿಂದ, ನವೆಂಬರ್ ತಿಂಗಳಲ್ಲೇ ಮೂರು ಕಾರ್ಯಕ್ರಮಗಳನ್ನು ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಈ ಗೌರವಸಮರ್ಪಣೆಯ ಜೊತೆಗೆ, 'ಗಂಧದಗುಡಿ' ಡಾಕ್ಯುಡ್ರಾಮ ಬಿಡುಗಡೆಯಾಗುತ್ತಿರುವುದು ಪುನೀತ್ ಅಭಿಮಾನಿಗಳ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿದೆ.

ರಾಜ್‌ಕುಮಾರ್ ಅಭಿನಯದ, ವಿಜಯ್ ನಿರ್ದೇಶನದ 'ಗಂಧದಗುಡಿ' ಸಿನಿಮಾ 1973ರಲ್ಲಿ ತೆರೆಕಂಡಿತ್ತು. ಆ ಕಥೆಯ ಹೊಸ ಆವೃತ್ತಿಯಂತೆ ಶಿವರಾಜ್‌ಕುಮಾರ್ ಅಭಿನಯದಲ್ಲಿ 1994ರಲ್ಲಿ 'ಗಂಧದಗುಡಿ ಭಾಗ–2' ತೆರೆಕಂಡಿತ್ತು. ಅಪ್ಪನ ಗಂಧದಗುಡಿ ತೆರೆಕಂಡ ಸುಮಾರು 50 ವರ್ಷಗಳ ನಂತರ, ಈಗ ಡಾಕ್ಯುಡ್ರಾಮಾ ರೂಪದಲ್ಲಿ ಮಗನ ಅಭಿನಯದ 'ಗಂಧದಗುಡಿ' ಅ. 28ರಂದು ತೆರೆಕಾಣುತ್ತಿದೆ. ರಾಜ್ಯದ ವನ್ಯವೈವಿಧ್ಯವನ್ನು ಸಂಭ್ರಮಿಸುವ ಈ ದೃಶ್ಯಪ್ರಯೋಗ (ನಿರ್ದೇಶನ: ಅಮೋಘವರ್ಷ) ಪುನೀತ್ ಅವರ ಮಹತ್ವಾಕಾಂಕ್ಷೆಯ ಪ್ರಯತ್ನವಾಗಿತ್ತು.

■